**OCTOBER 31, 2024**

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಆಕಾಶವಾಣಿಯ ಆತ್ಮೀಯ ಕೇಳುಗರಿಗೆಲ್ಲ.. ನರಕ ಚತುರ್ದಶಿ ಹಾಗೂ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು.

<><><>

ಮುಖ್ಯಾಂಶಗಳು

<><><>

- ಇಂದು ನರಕ ಚತುರ್ದಶಿ; ದೀಪಾವಳಿ ಸಂಭ್ರಮಾಚರಣೆಗೆ, ನಾಡಿನಾದ್ಯಂತ ಭರದ ಸಿದ್ಧತೆ.
- 'ಹಣತೆ ಬೆಳಗಿಸಿ, ದೀಪಾವಳಿ ಆಚರಿಸಿ; ಪಟಾಕಿ ತ್ಯಜಿಸಿ, ಮಾಲಿನ್ಯ ತಡೆಯಿರಿ' – ಈಶ್ವರ ಖಂಡ್ರೆ, ಮನವಿ.
- ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಕರ್ನಾಟಕ ಸಂಭ್ರಮ–50, ಸುವರ್ಣ ಮಹೋತ್ಸವ ಪುರಸ್ಕಾರಕ್ಕೆ, ಒಟ್ಟು 169 ಸಾಧಕರು ಆಯ್ಕೆ.
- ದೇಶದ ಏಕತೆಗೆ ಭದ್ರ ಅಡಿಪಾಯ ಹಾಕಿದ, ಸರ್ದಾರ ಪಟೇಲರ ದೂರದೃಷ್ಟಿ ಮನನೀಯ – ಪ್ರಲ್ಹಾದ ಜೋಶಿ.

<><><>

ಈಗ ವಾರ್ತೆಗಳ ವಿವರ

<><><>

ಇಂದು ನರಕ ಚತುರ್ದಶಿ. ಶ್ರೀ ಕೃಷ್ಣ ನರಕಾಸುರನನ್ನು ವಧಿಸಿದ ದಿನ. ದೀಪಾವಳಿಯ ಹಿಂದಿನ ದಿನ, ಆಚರಿಸಲಾಗುವ ಪ್ರಮುಖ ಹಬ್ಬ. 5 ದಿನಗಳಿಗಿಂತ ಹೆಚ್ಚು ಆಚರಿಸಲಾಗುವ, ದೀಪಾವಳಿ ಹಬ್ಬದ, ಎರಡನೇ ದಿನ. ವಿಕ್ರಮ ಸಂವತ್ಸರದ, ಕೃಷ್ಣ ಪಕ್ಷದ ಚತುರ್ದಶಿಯ ಈ ವಿಶೇಷ ದಿನದಂದು, ಅನೇಕ ಧಾರ್ಮಿಕ ಆಚರಣೆಗಳನ್ನು, ಶ್ರದ್ಧೆಯಿಂದ ಪಾಲಿಸಲಾಗುತ್ತದೆ. ದಕ್ಷಿಣ ಭಾರತದ ಕೆಲವು ಭಾಗಗಳಲ್ಲಿ ಇದನ್ನು ದೀಪಾವಳಿ ಭೋಗಿ ಎಂದು ಕರೆಯಲಾಗುತ್ತದೆ. ದುಷ್ಟರ ಸಂಹಾರ, ಶಿಷ್ಟರ ರಕ್ಷಣೆಯ

ನಂಬಿಕೆಯೊಂದಿಗೆ, ಬ್ರಹ್ಮ ಮುಹೂರ್ತದಲ್ಲಿ, ಎಣ್ಣೆ ಸ್ನಾನ ಮಾಡುವ ಪದ್ಧತಿ ಇದೆ. ಕರ್ನಾಟಕ, ತಮಿಳುನಾಡು ಮತ್ತು ಗೋವಾ ರಾಜ್ಯಗಳಲ್ಲಿ, ನರಕ ಚತುರ್ದಶಿಯನ್ನು, ದೀಪಾವಳಿಯ ದಿನದಂದು ಆಚರಿಸಲಾಗುತ್ತದೆ.

<><><>

'ಹಣತೆ ಬೆಳಗಿಸಿ, ದೀಪಾವಳಿ ಆಚರಿಸಿ; ಪಟಾಕಿ ತ್ಯಜಿಸಿ, ಮಾಲಿನ್ಯ ತಡೆಯಿರಿ' ಎಂಬ ಧ್ಯೇಯದೊಂದಿಗೆ, ಪರಿಸರ ಸ್ನೇಹಿ ದೀಪಾವಳಿ ಹಬ್ಬ ಆಚರಿಸಲು, ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ, ಜನತೆಯಲ್ಲಿ ಮನವಿ ಮಾಡಿದ್ದಾರೆ. ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ, ರಾತ್ರಿ 8 ಗಂಟೆಯಿಂದ, 10 ಗಂಟೆಯ ವರೆಗೆ ಮಾತ್ರ, ಕಡಿಮೆ ಸದ್ದಿನ, ಹಸಿರು ಪಟಾಕಿಗಳನ್ನು ಸಿಡಿಸುವಂತೆ, ಅವರು ಮನವಿ ಮಾಡಿದ್ದಾರೆ.

<><><>

ಹಸಿರು, ಸ್ವಚ್ಛ ಮತ್ತು ಪ್ಲಾಸ್ಟಿಕ್ ಮುಕ್ತ ದೀಪಾವಳಿಯನ್ನು ಸಂಕೇತಿಸುವ, ಹಸಿರು ದೀಪಾವಳಿ ಆಚರಣೆಯ ಬಗ್ಗೆ, ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಹಸಿರು ದೀಪಾವಳಿ ಪ್ರತಿಜ್ಞೆಯನ್ನು ಒಳಗೊಂಡ, ಇನ್ಫೋಗ್ರಾಫಿಕ್ ಪೋಸ್ಟರ್ ಮೂಲಕ, ಜಾಗೃತಿ ಮೂಡಿಸುತ್ತಿದೆ.

<><><>

ಶಬ್ದ ಮಾಲಿನ್ಯದಿಂದ ಉಂಟಾಗುವ ಕಿವುಡುತನ ಸಾಮಾನ್ಯವಾಗಿ ಕಣ್ಣಿಗೆ ಕಾಣದು. ಕೂಡಲೇ ಗಮನಕ್ಕೆ ಬಾರದು. ದೂರಗಾಮಿ ಅಡ್ಡ ಪರಿಣಾಮಗಳನ್ನು ಸಹ ಉಂಟು ಮಾಡುತ್ತದೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ, ಹಿರಿಯ ಕಿವಿ, ಮೂಗು ಹಾಗೂ ಗಂಟಲು ತಜ್ಞ, ಡಾಕ್ಟರ್ ಉಮೇಶ್ ನಾಗಲೋಟಿಮಠ.

<><><>

ಡಾಕ್ಟರ್ ಉಮೇಶ್ ನಾಗಲೋಟಿಮಠ ಧ್ವನಿ 40 ಸೆಕೆಂದುಗಳು

<><><>

ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಸರಬರಾಜಾಗುವ, ಅಗತ್ಯ ಔಷಧಿಗಳ ಪಟ್ಟಿಯನ್ನು, 250 ರಿಂದ ಒಂದು ಸಾವಿರಕ್ಕೆ ಏರಿಸಲಾಗಿದೆ; ಎಲ್ಲ ಅಗತ್ಯ ಔಷಧಿಗಳು ಇನ್ನು ಮುಂದೆ, ರಾಜ್ಯದ ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಸಿಗುವಂತೆ, ಕ್ರಮ ಕೈಗೊಳ್ಳಲಾಗುತ್ತಿದೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ ಗುಂಡೂರಾವ ತಿಳಿಸಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರದ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ, ಅಜಾಕ್ಸ್ ಕಂಪನಿ ನಿರ್ಮಿಸಿದ, ನೂತನ ಹೊರ ರೋಗಿಗಳ ಕಟ್ಟಡ, ರಕ್ತನಿಧಿ ಹಾಗೂ ಡಯಾಲಿಸಿಸ್ ಕೇಂದ್ರವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ರಾಜ್ಯದ ಎಲ್ಲ ಜಿಲ್ಲಾ ಆಸ್ಪತ್ರೆಗಳಿಗೆ ಎಂ.ಆರ್.ಐ ಹಾಗೂ ಸಿ.ಟಿ. ಸ್ಕ್ಯಾನಿಂಗ್ ಯಂತ್ರಗಳನ್ನು ಪೂರೈಸಲಾಗುತ್ತಿದೆ. ಜನವರಿ 1 ರಿಂದ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಗೃಹ ಆರೋಗ್ಯ ಯೋಜನೆ ಜಾರಿಗೊಳ್ಳಲಿದೆ ಎಂದರು.

<><><>

'ಗೃಹ ಆರೋಗ್ಯ ಯೋಜನೆ'ಗೆ, ಕೋಲಾರ ಜಿಲ್ಲೆಯಲ್ಲಿ ಚಾಲನೆ ದೊರೆತಿದೆ. ಮಧುಮೇಹ, ಅಧಿಕ ರಕ್ತದೊತ್ತಡ, ಕ್ಯಾನ್ಸರ್, ಮಾನಸಿಕ ಆರೋಗ್ಯದ ಬಗ್ಗೆ, 30 ವರ್ಷಕ್ಕಿಂತ ಮೇಲ್ಪಟ್ಟ ನಾಗರಿಕರ ಆರೋಗ್ಯ ಪರೀಕ್ಷಿಸಲು, ಆರೋಗ್ಯ ಇಲಾಖೆ ಕಾರ್ಯಕರ್ತರ ತಂಡ, ಮನೆಗಳಿಗೆ ಭೇಟಿ ನೀಡಿ, ಅಗತ್ಯ ಆರೋಗ್ಯ ಸೇವೆ ಒದಗಿಸುತ್ತಿದೆ. ಮಧುಮೇಹ, ರಕ್ತದೊತ್ತಡದ ಔಷಧಿಯನ್ನು, ಉಚಿತವಾಗಿ ನೀಡಲಾಗುತ್ತಿದೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ತಿಳಿಸಿದೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ರಾಜ್ಯದ ವಿವಿಧ ಕ್ಷೇತ್ರಗಳ, 69 ಜನ ಸಾಧಕರನ್ನು ಪ್ರಸಕ್ತ ಸಾಲಿನ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಕರ್ನಾಟಕ ಸಂಭ್ರಮ–50, ಸುವರ್ಣ ಮಹೋತ್ಸವ ಪ್ರಶಸ್ತಿ ಸಹ ಪ್ರಕಟಿಸಲಾಗಿದ್ದು, ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆಗೈದ, 50 ಮಹಿಳೆಯರು ಹಾಗೂ 50 ಪುರುಷರನ್ನು ರಾಜ್ಯ ಸರ್ಕಾರ ಆಯ್ಕೆ ಮಾಡಿದೆ.

<><><>

ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ಶಿವರಾಜ ತಂಗಡಗಿ, ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿ, 169 ಜನರ ಆಯ್ಕೆಯ ವಿಷಯ ತಿಳಿಸಿದರು.

<><><>

ನಾಳೆ, ನವೆಂಬರ್ 1, ಕನ್ನಡ ರಾಜ್ಯೋತ್ಸವದಂದು, ಸಂಜೆ 4.30ಕ್ಕೆ, ಬೆಂಗಳೂರಿನ ವಿಧಾನಸೌಧದ ಎದುರು ಆಯೋಜಿತ ಕಾರ್ಯಕ್ರಮದಲ್ಲಿ, 169 ಪ್ರಶಸ್ತಿಗಳನ್ನು ಮುಖ್ಯಮಂತ್ರಿ ಪ್ರದಾನ ಮಾಡಲಿದ್ದಾರೆ.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿದ್ದು, ಅವರ ಸಾಧನೆ ನಾಡು, ನುಡಿಗೆ ಹಾಗೂ ಯುವ ಪೀಳಿಗೆಗೆ ಮಾದರಿಯಾಗಿದೆ. ಎಲ್ಲ ಗಣ್ಯರು ಪ್ರಶಸ್ತಿಯ ಗೌರವವನ್ನು ಹೆಚ್ಚಿಸಿದ್ದಾರೆ ಎಂದಿದ್ದಾರೆ.

<><><>

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ, ಧಾರವಾಡ ಜಿಲ್ಲೆ, ನವಲಗುಂದ ತಾಲೂಕು ನಾಗನೂರು ಗ್ರಾಮದ, ಖ್ಯಾತ ತತ್ವಪದಕಾರ ಇಮಾಮಸಾಬ ವಲ್ಲೆಪ್ಪನವರ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಇಮಾಮಸಾಬ ವಲ್ಲೆಪ್ಪನವರ ಧ್ವನಿ 40 ಸೆಕೆಂದುಗಳು

<><><>

ಸ್ವತಂತ್ರ ಭಾರತದ ಪ್ರಥಮ ಗೃಹ ಮಂತ್ರಿ, ಉಕ್ಕಿನ ಮನುಷ್ಯ ಎಂದೇ ಖ್ಯಾತರಾಗಿದ್ದ, ಸರ್ದಾರ್ ವಲ್ಲಭ ಭಾಯಿ ಪಟೇಲ್ ಅವರ, 150ನೇ ಜನ್ಮ ದಿನದ ಅಂಗವಾಗಿ, ಏಕತೆಗಾಗಿ ಓಟ ರಾಜ್ಯಾದ್ಯಂತ ಹಲವೆಡೆ

ಜರುಗಿತು.ಇಂದು, ಸರ್ದಾರ ಪಟೇಲರ ಜನ್ಮದಿನ. ಆದರೆ ನರಕ ಚತುದರ್ಶಿ ಹಾಗೂ ದೀಪಾವಳಿ ಹಿನ್ನೆಲೆ, ನಿನ್ನೆ ಬುಧವಾರವೇ ರನ್ ಫಾರ್ ಯುನಿಟಿ ಕಾರ್ಯಕ್ರಮ ಬಹುತೇಕ ಕಡೆ ಜರುಗಿತು.

<><><>

ಹುಬ್ಬಳ್ಳಿಯಲ್ಲಿ 'ಏಕತೆಗಾಗಿ ಓಟ' ಕಾರ್ಯಕ್ರಮಕ್ಕೆ ಚಾಲನೆ ನೀಡಿದ, ಕೇಂದ್ರದ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ದೇಶದ ಏಕತೆಗೆ ಭದ್ರ ಅಡಿಪಾಯ ಹಾಕಿದ, ಇಡೀ ದೇಶವನ್ನು ಒಗ್ಗೂಡಿಸಿದ ಸರ್ದಾರರ ದೂರದೃಷ್ಟಿ ಮನನೀಯ, ಎಂದರು.

<><><>

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಧ್ವನಿ 48 ಸೆಕೆಂದುಗಳು

<><><>

ರಾಜ್ಯ ಮಟ್ಟದ ಶೈಕ್ಷಣಿಕ ಹಾಕಿ ಟೂರ್ನಿಯ, 17 ವರ್ಷದ ಒಳಗಿನ ಬಾಲಕರು ಮತ್ತು ಬಾಲಕಿಯರ, ಎರಡೂ ವಿಭಾಗಗಳಲ್ಲಿ, ಮೈಸೂರು ವಿಭಾಗದ ತಂಡಗಳು, ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾದವು. ಕೊಡಗು ಜಿಲ್ಲೆ, ಪೊನ್ನಂಪೇಟೆಯ ಕರ್ನಾಟಕ ಪಬ್ಲಿಕ್ ಶಾಲೆಯ, ಹಾಕಿ ಟರ್ಫ್ ಮೈದಾನದಲ್ಲಿ ಆಯೋಜಿತ, ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿಭಾಗದ, ಪಂದ್ಯಾವಳಿಯಲ್ಲಿ ಮೈಸೂರು ವಿಭಾಗದ ಬಾಲಕರ ತಂಡ, ಕೊಡಗು ಜಿಲ್ಲೆ ಕೂಡಿಗೆ ಕ್ರೀಡಾ ವಸತಿ ಶಾಲೆಯ ತಂಡದ ವಿರುದ್ಧ, 3 – 1 ಗೋಲುಗಳಿಂದ ಜಯಗಳಿಸಿತು. ಬಾಲಕಿಯರ ವಿಭಾಗದಲ್ಲಿ, ಮೈಸೂರು ವಿಭಾಗದ ತಂಡ, ಕೊಡಗು ಜಿಲ್ಲೆಯ ಕೂಡಿಗೆ ವಸತಿ ಶಾಲೆ ತಂಡವನ್ನು 2–0 ಅಂತರದಿಂದ ಪರಾಭವಗೊಳಿಸಿತು.

<><><>

ಕರ್ನಾಟಕದ ದಕ್ಷಿಣ ಒಳನಾಡು ಸೇರಿದಂತೆ, ಕೆಲವೆಡೆ ಮುಂದಿನ ಎರಡು ದಿನಗಳಲ್ಲಿ, ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು, ಭಾರತೀಯ ಹವಾಮಾನ ಇಲಾಖೆ, ಮುನ್ನೆಚ್ಚರಿಕೆ ನೀಡಿದೆ.

<><><>

ಧಾರವಾಡದ ನೆಹರು ಯುವ ಕೇಂದ್ರ ಘಟಕದ ವತಿಯಿಂದ, ಸೂಪರ್ ಮಾರುಕಟ್ಟೆಯಲ್ಲಿ, 'ದೀಪಾವಳಿ ವಿತ್ ಮಾಯ್ ಭಾರತ್' ಪರಿಕಲ್ಪನೆ ಅಡಿ, ಸ್ವಚ್ಛತಾ ಅಭಿಯಾನ ಜರುಗಿತು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಇಂದು ನರಕ ಚತುರ್ದಶಿ; ದೀಪಾವಳಿ ಸಂಭ್ರಮಾಚರಣೆಗೆ, ನಾಡಿನಾದ್ಯಂತ ಭರದ ಸಿದ್ಧತೆ.
- 'ಹಣತೆ ಬೆಳಗಿಸಿ, ದೀಪಾವಳಿ ಆಚರಿಸಿ; ಪಟಾಕಿ ತ್ಯಜಿಸಿ, ಮಾಲಿನ್ಯ ತಡೆಯಿರಿ' – ಈಶ್ವರ ಖಂಡ್ರೆ, ಮನವಿ.
- ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಕರ್ನಾಟಕ ಸಂಭ್ರಮ–50, ಸುವರ್ಣ ಮಹೋತ್ಸವ ಪುರಸ್ಕಾರಕ್ಕೆ, ಒಟ್ಟು 169 ಸಾಧಕರು ಆಯ್ಕೆ.

- ದೇಶದ ಏಕತೆಗೆ ಭದ್ರ ಅಡಿಪಾಯ ಹಾಕಿದ, ಸರ್ದಾರ ಪಟೇಲರ ದೂರದೃಷ್ಟಿ ಮನನೀಯ – ಪ್ರಲ್ಹಾದ ಜೋಶಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ